ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/210/2022-23

ದಿನಾಂಕ 18-01-2023

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 30-12-2022ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:30-12-2022ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ, ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ: 07-02-2023ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

18/1/2023

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 30.12.2022 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ವಿದ್ಯಾ ವಿಷಯಕ ಪರಿಷತ್ ಮೂರನೇ ಸಾಮಾನ್ಯ ಸಭೆಯ ನಡವಳಿಗಳು.**

**<u>ಸಭೆಯಲ್ಲಿ ಹಾಜರಾಗಿದ್ದ ಸದಸ್ಯರುಗಳು</u>**

1. ಪ್ರೊ. ಹೆಚ್.ರಾಜಶೇಖರ್, (ಪ್ರಭಾರ) ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ.ಗಿರಿಧರ್‌ರಾವ್.ಎಂ.ಎಸ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಶ್ರೀ ಸಿ.ಎನ್. ಮಂಜೇಗೌಡ ಎಂ.ಎಲ್.ಸಿ
4. ಡಾ. ವೆಂಕಟೇಶಯ್ಯ – ಸದಸ್ಯರು
5. ಡಾ. ಜಯಶಂಕರ್ ಎನ್. – ಸದಸ್ಯರು
6. ಶ್ರೀ ಟಿ. ನಾಗರಾಜು – ಸದಸ್ಯರು
7. ಡಾ. ಪ್ರಶಾಂತ್ ಎಸ್.ಟಿ. – ಸದಸ್ಯರು
8. ಪ್ರೊ. ಕೆ.ವಿ.ಅಯ್ಯಣ್ಣ – ಸದಸ್ಯರು
9. ಶ್ರೀ ಹೆಚ್.ಪಿ.ಶಶಿಕುಮಾರ್ – ಸದಸ್ಯರು
10. ಡಾ. ಭಾಗ್ಯಲಕ್ಷ್ಮಿ – ಸದಸ್ಯರು
11. ಡಾ. ಬಿಂದು ಅನಿಲ್ ಥಾಮಸ್ – ಸದಸ್ಯರು
12. ಶ್ರೀ ಶಿವಕುಮಾರ್.ಎಂ – ಸದಸ್ಯರು
13. ಶ್ರೀ ಎಂ.ಸಿ.ರಾಜಶೇಖರ್ – ಸದಸ್ಯರು
14. ಪ್ರೊ. ಹೆಚ್.ಟಿ.ಬಸವರಾಜಪ್ಪ – ಸದಸ್ಯರು
15. ಪ್ರೊ. ಮುಜಾಫರ್ ಹೆಚ್. ಅಸ್ಸಾದಿ – ಸದಸ್ಯರು
16. ಪ್ರೊ. ಟಿ.ಆರ್. ಮಾರುತಿ – ಸದಸ್ಯರು
17. ಪ್ರೊ. ಎಸ್. ಮದಿಅಳಗನ್ – ಸದಸ್ಯರು
18. ಪ್ರೊ. ಬಿ.ಶಂಕರ್ – ಸದಸ್ಯರು
19. ಪ್ರೊ. ವೈ.ಬಿ. ಬಸವರಾಜು – ಸದಸ್ಯರು
20. ಪ್ರೊ. ಮಲ್ಲಿನಾಥ್ ಕುಂಬಾರ್ – ಸದಸ್ಯರು
21. ಪ್ರೊ. ಎಂ.ಎಸ್.ಶೇಖರ್ – ಸದಸ್ಯರು
22. ಪ್ರೊ. ಜಿ.ಆರ್.ಜನಾರ್ಧನ – ಸದಸ್ಯರು
23. ಪ್ರೊ. ಎಂ.ಎ.ಶ್ರೀಧರ – ಸದಸ್ಯರು
24. ಡಾ. ಪಿ. ಸರಸ್ವತಿ, ಗ್ರಂಥಪಾಲಕರು – ಸದಸ್ಯರು
25. ಡಾ.ಚಂದ್ರಶೇಖರ್, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ – ಸದಸ್ಯರು
26. ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ – ಸದಸ್ಯರು
27. ಪ್ರೊ. ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು (ಪ್ರಭಾರ) ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
28. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
29. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) – ಸದಸ್ಯರು

30. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿ – ಸದಸ್ಯರು
31. ಕುಮಾರಿ ಅನುಷಾ.ಪಿ.ಜಿ – ಸದಸ್ಯರು
32. ಕುಮಾರಿ ಮುಸ್ಕನ್ ಭಾನು – ಸದಸ್ಯರು
33. ಕುಮಾರಿ ರೋಹನ್.ವಿ – ಸದಸ್ಯರು
34. ಕುಮಾರಿ ಅನು.ಎಸ್.ಜೆ – ಸದಸ್ಯರು
35. ಶ್ರೀ ಉದಯ್.ಎಂ.ಎಲ್ – ಸದಸ್ಯರು
36. ಶ್ರೀಮತಿ ವಿ.ಆರ್. ಶೈಲಜ, ಕೆ..ಎ.ಎಸ್,. ಕುಲಸಚಿವೆ ಹಾಗೂ ಸದಸ್ಯ ಕಾರ್ಯದರ್ಶಿ

**ಸಭೆಯಲ್ಲಿ ಗೈರು ಹಾಜರಾಗಿದ್ದವರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ
3. ಶ್ರೀ ಪ್ರೀತಂ ಜೆ. ಗೌಡ, ಎಂ.ಎಲ್.ಎ
4. ಶ್ರೀ ಎಂ.ಶ್ರೀನಿವಾಸ್, ಎಂ.ಎಲ್.ಎ
5. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ
6. ಶ್ರೀ ಎಂ.ಪಿ.ಕುಶಾಲಪ್ಪ, ಎಂ.ಎಲ್.ಸಿ
7. ಶ್ರೀಮತಿ ನಾಗರತ್ನಮ್ಮ.ಕೆ
8. ಡಾ. ಜಿ.ಗೋವಿಂದರಾಜು
9. ಡಾ. ನಿರ್ಮಲ ಹೆಚ್.ಎಂ
10. ಶ್ರೀ ಎಸ್.ಹೆಚ್.ಗಂಗೇಗೌಡ
11. ಪ್ರೊ. ಸೌಮ್ಯ ಈರಪ್ಪ.ಕೆ
12. ಶ್ರೀ ನಂದೀಶ್.ಎಸ್
13. ಶ್ರೀ ಎಂ.ಪವನ್ ಕುಮಾರ್
14. ಶ್ರೀ ಉದಯ್ ಎಂ.ಎಲ್

ಮಾನ್ಯ ಕುಲಪತಿಗಳು ಮಾತನಾಡಿ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಮಾನ್ಯ ಕುಲಸಚಿವರು ಮಾತನಾಡಿ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನೂ ಸ್ವಾಗತಿಸಿ, ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನೇಮಕಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1. ಮೈಸೂರು ವಿಶ್ವವಿದ್ಯಾನಿಲಯದ (ಪ್ರಭಾರ) ಕುಲಪತಿಗಳಾಗಿ ನೇಮಕಗೊಂಡಿರುವ ಪ್ರೊ. ಹೆಚ್. ರಾಜಶೇಖರ್, ಡೀನರು, ವಾಣಿಜ್ಯ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಸಚಿವ (ಆಡಳಿತ)ರಾಗಿ ನೇಮಕಗೊಂಡಿರುವ ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., (ಆಯ್ಕೆ ಶ್ರೇಣಿ), ಕರ್ನಾಟಕ ಸರ್ಕಾರ.
3. ಪ್ರೊ. ಎಂ.ಎ. ಶ್ರೀಧರ, ಹಿರಿಯ ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು.

ಹಾಗೂ

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಅಧಿಕಾರಿಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಜಿ. ಹೇಮಂತ್ ಕುಮಾರ್, ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

2. ಪ್ರೊ. ಶಿವಪ್ಪ ಆರ್., ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

3. ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು.

ಶಿಕ್ಷಣ ಮಂಡಳಿ ಸದಸ್ಯರು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ಹೆಚ್.ಟಿ. ಬಸವರಾಪ್ಪರವರು ಮಾತನಾಡಿ, ವಿಶ್ವವಿದ್ಯಾನಿಲಯದ ಮುಖ್ಯಸ್ಥರಾದ ಕುಲಪತಿಯವರ ಅವರ ಮೇಲೆ ತನಿಖೆ ಮಾಡಲು ಸಮಿತಿಯನ್ನು ರಚಿಸಲಾಗಿದ್ದು ಜೊತೆಗೆ ಅವರು ಕೂಡ ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ವಿರುದ್ಧ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ, ಇಷ್ಟೆಲ್ಲ ಇದ್ದರು ಕೂಡ ಈ ಸಭೆ ಅವಶ್ಯಕತೆ ಇದೆಯೇ ಜೊತೆಗೆ ಅವರು ಅಧ್ಯಕ್ಷರಾಗಿ ಸಭೆ ನಡೆಸಲು ಅವಶ್ಯಕತೆ ಇದಯೇ ಅಥವಾ ಇಲ್ಲವೊ ಎಂಬುದು ನನಗೆ ಗೊತ್ತಾಗುತ್ತಿಲ್ಲ **ಸದಸ್ಯರು**ಗಳು ಇದೆ ಎಂದರೆ ಮುಂದುವರಿಸಿ ನನ್ನದೇನು ಅಭ್ಯಂತರ ಇಲ್ಲ. ನಾಳೆ ನಾವೆಲ್ಲ ಸಭೆ ಮುಗಿಸಿ ಹೋದ ಮೇಲೆ ಯಾರಾದರು ಒಬ್ಬರು ಪ್ರಶ್ನಿಸಿದ್ದಲ್ಲಿ ಮತ್ತೆ ವಿಶ್ವವಿದ್ಯಾನಿಲಯದ ಬಗ್ಗೆ ಪತ್ರಿಕೆಗಳಲ್ಲಿ ಬರುವುದು ಬೇಡ, ಅದಕ್ಕೋಸ್ಕರ ನಾನು ಮುಂಜಾಗ್ರತವಾಗಿ ಜ್ಞಾಪಿಸುತ್ತಿದ್ದೇನೆ ಇದು ಸಮಂಜಸ ಎನ್ನುವುದಾದರೆ ಸಭೆ ನಡೆಸಿ ಇಲ್ಲದಿದ್ದರೆ ಇದನ್ನು ನಿಲ್ಲಿಸಿ ಎಂದು ಸಭೆಯ ಗಮನಕ್ಕೆ ತಂದರು.

ಈ ವಿಷಯದ ಬಗ್ಗೆ ಮಧ್ಯ ಪ್ರವೇಶಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡರವರು ಆರೋಪವಷ್ಟೇ ಕೇಳಿ ಬಂದಿದೆ ಅದು ಸಾಬೀತಾಗಿಲ್ಲ ಸಭೆ ನಡೆಸಬಹುದೆಂದು ಸಮ್ಮತಿ ವ್ಯಕ್ತಪಡಿಸಿದರು. ಇದಕ್ಕೆ ಮಾನ್ಯ ಸದಸ್ಯರುಗಳಾದ ಶ್ರೀ ಶಶಿಕುಮಾರ್ ಹಾಗೂ ಶ್ರೀ ಟಿ. ನಾಗರಾಜು ಅವರು ಬೆಂಬಲ ಸೂಚಿಸಿದರು.

ತದನಂತರ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಶಿಕ್ಷಣ ಮಂಡಳಿ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 10-11-2022ರಂದು ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 10-11-2022ರಂದು ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II 1 | ಒಬ್ಬರು ಶಿಕ್ಷಣ ಮಂಡಳಿ ಸದಸ್ಯರನ್ನು ಹಣಕಾಸು ಸಮಿತಿಗೆ ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ. |
| ತೀರ್ಮಾನ | ವಾಣಿಜ್ಯ ನಿಕಾಯದ ಡೀನರಾದ ಪ್ರೊ. ಹೆಚ್.ರಾಜಶೇಖರ್‌ರವರು, ಕುಲಪತಿ (ಪ್ರಭಾರ)ಯಾಗಿ ನೇಮಕಗೊಂಡಿರುವುದರಿಂದ ಇವರಿಂದ ತೆರವಾದ ಹಣಕಾಸು ಸಮಿತಿ |

| | |
|---|---|
| | ಸದಸ್ಯರ ಸ್ಥಾನಕ್ಕೆ, ಶಿಕ್ಷಣ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಶಿಕ್ಷಣ ಮಂಡಳಿ ಸದಸ್ಯರಾದ ಪ್ರೊ. ಜಿ.ಆರ್.ಜನಾರ್ಧನ್, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು. |
| II.2 | "ಭಾರತಿ ಮಹಿಳಾ ಸಮಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು ಮಹಿಳಾ ಅಧ್ಯಯನ ವಿಷಯದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ಮಹಿಳಾ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಭಾರತಿ ಮಹಿಳಾ ಸಮಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| II.3 | ವಿಶ್ವವಿದ್ಯಾನಿಲಯದಲ್ಲಿನ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಯನ್ನು ರಚಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿತ್ತು, ಆದರೆ ಕೆಲವು ತಿದ್ದುಪಡಿಗಳೊಂದಿಗೆ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದು ಪುನ ಸರ್ಕಾರಕ್ಕೆ ಕಳುಹಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಪರಿನಿಯಮಾವಳಿಗೆ ಕೆಲವು ತಿದ್ದುಪಡಿ ಮಾಡಿ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಈಗಾಗಲೇ ಪಡೆಯಲಾಗಿದೆ ಹಾಗೂ ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದ್ದು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಮೋದನೆ ನಂತರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಈ ಸಂಬಂಧವಾಗಿ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ/ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಸುಮಾರು 10-15 ವರ್ಷದಿಂದ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಕೆಲವರು ಖಾಯಂಗೊಳಿಸುವಂತೆ ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು. ನ್ಯಾಯಾಲಯಕ್ಕೆ ಮೊರೆ ಹೋದ ಅತಿಥಿ ಉಪನ್ಯಾಸಕರುಗಳನ್ನು ಖಾಯಂಗೊಳಿಸುವಂತೆ ಹೈಕೋರ್ಟ್ ಆದೇಶ ಹೊರಡಿಸಿದ್ದು ವಿಶ್ವವಿದ್ಯಾನಿಲಯವು ಯಾವ ಕ್ರಮ ಕೈಗೊಂಡಿರುತ್ತದೆ ಹಾಗೂ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೇ? ಎಂದು ಪ್ರಶ್ನಿಸಿದರು ಮತ್ತು ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಬೇಕು. ಅತಿಥಿ ಉಪನ್ಯಾಸಕರುಗಳ ನೇಮಕಾತಿ ಸಂದರ್ಭದಲ್ಲಿ ಹೊಸಬರನ್ನು ನೇಮಿಸುವುದರೊಂದಿಗೆ ಸುಮಾರು ವರ್ಷದಿಂದ ಹಾಗೂ ನ್ಯಾಯಾಲಯಕ್ಕೆ ಮೊರೆ ಹೋಗಿದ್ದ ಅತಿಥಿ ಉಪನ್ಯಾಸಕರುಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗುವುದೆಂದು ತಿಳಿಸಿದರು. |

| | |
|---|---|
| | ಶ್ರೀ ಸಿ.ಎನ್. ಮಂಜೇಗೌಡರವರು ಮಾತನಾಡಿ, ಸರ್ಕಾರಕ್ಕೆ ಯಾವಾಗ ಪತ್ರ ಬರೆಯುತ್ತೀರಿ ಎಂದು ಪ್ರಸ್ತಾಪಿಸಿ ಸರ್ಕಾರಕ್ಕೆ ಪತ್ರ ಬರೆದ ಒಂದು ಪ್ರತಿಯನ್ನು ನನಗೆ ಯಾವಾಗ ನೀಡುತ್ತೀರೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ನಡವಳಿಗಳು ಅನುಮೋದನೆಗೊಂಡ ನಂತರ ಒಂದು ವಾರದೊಳಗೆ ಸರ್ಕಾರಕ್ಕೆ ಪತ್ರ ಬರೆದು ಇದರ ಒಂದು ಪ್ರತಿಯನ್ನು ತಮಗೆ ನೀಡಲಾಗುವುದೆಂದು ತಿಳಿಸಿದರು<br>ಪ್ರೊ. ಕೆ.ವಿ. ಅಯ್ಯಣ್ಣರವರು ಮಾತನಾಡಿ, ಕೋರ್ಟ್ ಆದೇಶ ಬಂದರೂ ಕೂಡ ನೇಮಕ ಮಾಡಿಕೊಳ್ಳಲು ಸಾಧ್ಯವಿಲ್ಲ, ಇದಕ್ಕೆ ರೆಸಲ್ಯೂಷನ್, ಸ್ಟ್ಯಾಚೂಟ್ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳಿ ಹಾಗೂ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಕಳುಹಿಸಿ ಅಲ್ಲಿಂದ ಆನುಮೋದನೆಯಾಗಿ ಬಂದರೆ ಮಾತ್ರ ಪರಿಗಣಿಸಲು ಸಾಧ್ಯ ಎಂದು ತಿಳಿಸಿದರು.<br>ಪ್ರೊ. ಮಲ್ಲಿನಾಥ್ ಕುಂಬಾರ್‌ರವರು ಮಾತನಾಡಿ, 2018 ಯುಜಿಸಿ ನಿಯಮಾನುಸಾರ ಬೋಧಕರ ಹುದ್ದೆಗಳಿಗೆ ನೇಮಕಾತಿ ಮಾಡುವುದಕ್ಕಾಗಿ ಮತ್ತು ಪದೋನ್ನತಿಗಳನ್ನು ನೀಡಲು ರೆಗ್ಯೂಲೇಷನ್‌ಗಳನ್ನು ಮಾಡಿದ್ದು, 2016ರಲ್ಲಿ ವೇತನ ಪರಿಷ್ಕರಣೆ ನಂತರ ಯುಜಿಸಿಯವರು ನೇಮಕಾತಿ ವಿಧಾನ ಮಾಡಿ, ಆ ಆಧಾರದ ಮೇಲೆ ಆಯಾ ವಿಶ್ವವಿದ್ಯಾನಿಲಯಗಳು ಅದರ ಬಗ್ಗೆ ಸ್ಟ್ಯಾಚೂಟ್‌ನ್ನು ಸಿದ್ಧಪಡಿಸಿ ಇದನ್ನು ಶಿಕ್ಷಣ ಮಂಡಳಿ ಮತ್ತು ಸಿಂಡಿಕೇಟ್ ಹಣಕಾಸು ಸಮಿತಿ ಸಭೆಗಳಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ಈ ವಿಷಯವನ್ನು ಕಾರ್ಯಸೂಚಿಯಲ್ಲಿ ತಂದಿರುತ್ತಾರೆ ಎಂದು ನನ್ನ ಭಾವನೆ ಇದನ್ನು ಹೊರತುಪಡಿಸಿ ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ಖಾಯಂಗೊಳಿಸುವುದು ಈ ಅಜೆಂಡಾದ ಪರಿನಿಯಮಾವಳಿಯ ಉದ್ದೇಶವಲ್ಲ ಎಂದು ಸಭೆಯ ಗಮನಕ್ಕೆ ತಂದರು.<br>ಡಾ. ಹೆಚ್.ಟಿ. ಬಸವರಾಜಪ್ಪರವರು ಮಾತನಾಡಿ, ಕೋರ್ಟ್ ಆದೇಶ ನೀಡಿದೆ ಖಾಯಂ ಮಾಡಿ ಎಂದು. ಆದರೆ ವಿಶ್ವವಿದ್ಯಾನಿಲಯದ ವತಿಯಿಂದ ಖಾಯಂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ತಿಳಿಸಿದರು. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿನ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿನಿಯಮಾವಳಿಯನ್ನು ಶಿಫಾರಸ್ಸು ಮಾಡಿ, ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಶಿಕ್ಷಣ ಮಂಡಳಿ ಸಭೆಯು ತೀರ್ಮಾನಿಸಿತು. |
| II.4 | ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಜಿ. ಹೇಮಂತ ಕುಮಾರ್ ಚಿನ್ನದ ಪದಕ", "ಪ್ರೊ. ಸರೋಜ ರಾಮಪ್ಪ ಚಿನ್ನದ ಪದಕ" ಮತ್ತು ಶ್ರೀಮತಿ ದಿ॥ ಕಮಲಮ್ಮ, w/o ಶ್ರೀ ಜಿ.ಎ. ಶಿವಲಿಂಗಯ್ಯ ನಗದು ಬಹುಮಾನ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |

| ಕ್ರ. ಸಂ | ದಾನಿಗಳು ಕೋರಿರುವ ದತ್ತಿಯ ಹೆಸರು | ಷರತ್ತುಗಳು |
|---|---|---|
| 1 | ಪ್ರೊ. ಜಿ.ಹೇಮಂತ ಕುಮಾರ್ ಚಿನ್ನದ ಪದಕ | Bachelor Degree in Computer Science OR Computer Application in First Attempt and Securing Highest Marks |
| 2 | ಪ್ರೊ. ಸರೋಜ ರಾಮಪ್ಪ ಚಿನ್ನದ ಪದಕ | B.Sc. in Zoology in First Attempt and Securing Highest Marks |
| 3 | **ಶ್ರೀಮತಿ ದಿ॥ ಕಮಲಮ್ಮ w/o ಶ್ರೀ ಜಿ.ಎ.ಶಿವಲಿಂಗಯ್ಯ ನಗದು ಬಹುಮಾನ** | B.A in Kannada in First Attempt and Securing Highest Marks |

| | |
|---|---|
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು ಮೇಲೆ ನಮೂದಿಸಿರುವ ಮೂರು ದಾನಿಗಳ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ಮತ್ತು ಒಂದು ನಗದು ಬಹುಮಾನವನ್ನು ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಜಿ.ಹೇಮಂತ ಕುಮಾರ್ ಚಿನ್ನದ ಪದಕ", "ಪ್ರೊ. ಸರೋಜ ರಾಮಪ್ಪ ಚಿನ್ನದ ಪದಕ" ಮತ್ತು ಶ್ರೀಮತಿ ದಿ॥ ಕಮಲಮ್ಮ, w/o ಶ್ರೀ ಜಿ.ಎ.ಶಿವಲಿಂಗಯ್ಯ ನಗದು ಬಹುಮಾನ" ದತ್ತಿಗಳನ್ನು ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| | ಮಾನ್ಯ ಕುಲಸಚಿವರು ಮಾತನಾಡಿ ವಿಷಯ ಸಂಖ್ಯೆ II.5 ರಿಂದ II.13ರವೆಗಿನ ಕಾಲೇಜುಗಳಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಈ ವಿಷಯಗಳ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡುವಂತೆ ತಿಳಿಸಿದರು.<br>ಈ ಸಂಬಂಧ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ, ಪ್ರೊ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ ವಿಷಯ ಸಂಖ್ಯೆ: II.5 ರಿಂದ II.13ರವರೆಗಿನ ವಿಷಯಗಳಿಗೆ ಸಂಬಂಧಿಸಿದಂತೆ ಈಗಾಗಲೇ ಶಿಕ್ಷಣ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಕೆಳಗೆ ನಮೂದಿಸಿರುವ 09 ಕಾಲೇಜುಗಳಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಶಿಕ್ಷಣ ಮಂಡಳಿ ಸದಸ್ಯರಾದ ಶ್ರೀ ಹೆಚ್.ಪಿ. ಶಶಿಕುಮಾರ್ ಅವರು ಮಾತನಾಡಿ ಕಳೆದ ಶಿಕ್ಷಣ ಮಂಡಳಿ ಸಭೆಯಲ್ಲಿ ಶಿಕ್ಷಣ ಮಂಡಳಿ ಸದಸ್ಯರುಗಳನ್ನು ಸಮಿತಿಗೆ ಪರಿಗಣಿಸದಿದ್ದರು ಸರಿ, ಆದರೆ ಕಾಲೇಜುಗಳಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸುವ ಸಂಬಂಧವಾಗಿ ವಿಡಿಯೋವನ್ನು ಚಿತ್ರೀಕರಣ ಮಾಡಿ ಶಿಕ್ಷಣ ಮಂಡಳಿ ಸಭೆಯಲ್ಲಿ ವಿಡಿಯೋವನ್ನು ವೀಕ್ಷಿಸಲು ಕೋರಲಾಗಿತ್ತು. ಆದರೆ ಇದೂವರೆವಿಗೂ ಕ್ರಮವಹಿಸಿರುವುದಿಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಸಂಬಂಧಿಸಿದಂತೆ ಪ್ರೊ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ ಹಿಂದಿನ ಸಭೆಯಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಸ್ಥಾನದಲ್ಲಿ ಇರಲಿಲ್ಲವೆಂದು ತಿಳಿಸಿದರು ಹಾಗೂ ಕಾಲೇಜುಗಳಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡುವ ಸಂದರ್ಭದಲ್ಲಿ ಸಂಬಂಧಪಟ್ಟ ಕಾಲೇಜಿನವರು ವಿಡಿಯೋವನ್ನು ಚಿತ್ರೀಕರಣ ಮಾಡುತ್ತಾರೆಂದು ಸಭೆಯ ಗಮನಕ್ಕೆ ತಂದರು |

| | |
|---|---|
| | ಕುಲಪತಿಗಳು ಮಾತನಾಡಿ, ಕಾಲೇಜು ಹಂತದಲ್ಲಿ ಸಮಿತಿ ಭೇಟಿ ನೀಡಿರುವುದನ್ನು ವಿಡಿಯೋ ಮಾಡಿಸಲಾಗಿರುತ್ತದೆ. ಇದನ್ನು ಮುಂದಿನ ಸಭೆಯಲ್ಲಿ ವೀಕ್ಷಿಸುವಂತಹ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.<br>ಹಾಗೂ ಹಿಂದಿನ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಮಾತನಾಡಿ ಈಗ ಅನುಸಮರ್ಥನೆಗಾಗಿ. ಮಂಡಿಸಿರುವ ವಿಷಯಗಳು ಕಳೆದ ಸಭೆಯ ವಿಷಯಗಳೆಂದು ತಿಳಿಸಿ, ನೀವು ಕಳೆದ ಬಾರಿ ಸಭೆಯಲ್ಲಿ ತಿಳಿಸುವುದಕ್ಕೂ ಮೊದಲೇ ನಾವು ಕಾಲೇಜುಗಳಿಗೆ ಭೇಟಿ ನೀಡಿದ್ದೆವು ಎಂದು ಸಭೆಯ ಗಮನಕ್ಕೆ ತಂದರು. ಇನ್ನು ಮುಂದಿನ ದಿನಗಳಲ್ಲಿ ಪರಾಮರ್ಶನಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಕಾಲೇಜುಗಳ ವತಿಯಿಂದ ವಿಡಿಯೋ ಅಡಿಯೋ ಚಿತ್ರೀಕರಣ ಮಾಡಿಸಿ ಮುಂದಿನ ಶಿಕ್ಷಣ ಮಂಡಳಿ ಸಭೆಯಲ್ಲಿ ಪ್ರಸಾರ ಮಾಡಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br>ಕುಲಪತಿಗಳು ಮಾತನಾಡಿ, ಕಾಲೇಜು ಭೇಟಿಯ ಸಮಯ ವಿಡಿಯೋವನ್ನು ಮಾಡಿರುತ್ತಾರೆ. ತಮ್ಮ ಕೋರಿಕೆಯಂತೆ ಆ ವಿಡಿಯೋವನ್ನು ಕಳುಹಿಸುವ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿದರು.<br>ಪ್ರೊ. ಕೆ.ವಿ. ಅಯ್ಯಣ್ಣರವರು ಮಾತನಾಡಿ, ಎಲ್ಲಾ ಒಂಭತ್ತು ಕಾಲೇಜುಗಳಲ್ಲಿ ಷರತ್ತುಗಳನ್ನು ವಿಧಿಸಬೇಕಾದರೆ ಒಂದೇ ತರಹದ ಷರತ್ತುಗಳನ್ನು ಸ್ಟಿರಿಯೋ ಟೈಪ್‌ನಲ್ಲಿ ವಿಧಿಸಿದಂತೆ ಕಾಣಿಸುತ್ತದೆ. ಹಾಗೂ ರಿಸರ್ವೇಶನ್ ಪಾಲಿಸಿಗಳನ್ನು ಸರಿಯಾಗಿ ಪಾಲಿಸುತ್ತಿಲ್ಲ ಇದರ ಬಗ್ಗೆ ಗಮನಹರಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.<br>ಕಲಾ ನಿಕಾಯದ ಡೀನರಾದ ಪ್ರೊ. ಮುಝಾಫರ್ ಹೆಚ್ ಅಸ್ಸಾದಿ, ಅವರು ಮಾತನಾಡಿ, ಸ್ವಾಯತ್ತತಾ ಕಾಲೇಜುಗಳಿಗೆ ಮಾನ್ಯತೆ ನೀಡಲು ತೆರಳುವ ಪರಾಮರ್ಶನಾ ಸಮಿತಿಗೆ ಕಾಲೇಜಿನಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯವಿರುವುದು ಕಂಡು ಬರುತ್ತದೆ. ಆದರೆ ಕಾಲೇಜುಗಳು ನೋಡುವುದಕ್ಕೆ ಚೆನ್ನಾಗಿದೆ. ಉದಾಹರಣೆಗೆ ತಾವು ಒಂದು ಕಾನೂನು ಕಾಲೇಜಿಗೆ ಭೇಟಿ ನೀಡಿದ ಸಂಧರ್ಭದಲ್ಲಿ ಆ ಕಾಲೇಜಿನ ಮಹಿಳಾ ಪ್ರಾಂಶುಪಾಲರ ನೇಮಕಾತಿ ಆದೇಶವನ್ನು ಪರಿಶೀಲಿಸಿದಾಗ ಅವರನ್ನು ಯಾವುದೇ ಕಾರಣವನ್ನು ನೀಡಿ ಕೆಲಸದಿಂದ ತೆಗೆದುಹಾಕಬಹುದಾಗಿದೆ ಇಂತಹ ಕಾಲೇಜುಗಳಲ್ಲಿ ಸಂಬಳ ಪಾವತಿಸುತ್ತಿರುವುದು ಅತ್ಯಂತ ಕನಿಷ್ಟ. ನನ್ನ ವಾಹನ ಚಾಲಕನಿಗೆ ನೀಡುತ್ತಿರುವ ಸಂಬಳಕ್ಕಿಂತ ಕಡಿಮೆ. ಇಂತಹ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ ರೂ. 2000/- ಕ್ಕಿಂತ ಕಡಿಮೆ ಸಂಬಳ ನೀಡಲಾಗುತ್ತಿದೆ ಎಂದು ತಿಳಿಸಿದರು.<br>ಪ್ರೊ. ಕೆ.ವಿ. ಅಯ್ಯಣ್ಣ ಅವರು ಮಾತನಾಡಿ. ಕೆಲವು ಸ್ವಾಯತ್ತತಾ ಕಾಲೇಜುಗಳು ರೋಷ್ಟರ್ ಪದತಿ ಅನುಸರಿಸುತ್ತಿಲ್ಲವೆಂದು ತಿಳಿಸಿದರು. |
| II.5 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ |

| | |
|---|---|
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.6 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.7 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.8 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.9 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.10 | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ॥ ಭಾರತೀನಗರ ಭಾರತಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |

| | |
|---|---|
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ॥ ಭಾರತೀನಗರದ ಭಾರತಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.11 | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.12 | 2022-23ನೇ ಶೈಕ್ಷಣಿಕ ಸಾಲಿನ ಹಾಸನದ 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಹಾಸನದ 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| II.13 | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |
| III.1 | 2022-23ನೇ ಶೈಕ್ಷಣಿಕ ಸಾಲಿನಲ್ಲಿ NEP 2020ರ ಸ್ನಾತಕ ಪದವಿಯ English, Fine Arts, B.Com ಮತ್ತು SEC ಪತ್ರಿಕೆಗಳಾದ Financial Education and Investment Awareness and Artificial Intelligenceನ ಪಠ್ಯಕ್ರಮಗಳನ್ನು ಅಧಿಸೂಚಿಸಿರುವ ಬಗ್ಗೆ –ಅನುಸಮರ್ಥನೆಗಾಗಿ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನಲ್ಲಿ ಈ ಕೆಳಕಂಡ ಪತ್ರಿಕೆಗಳ ಪಠ್ಯಕ್ರಮಗಳನ್ನು ಸ್ನಾತಕ ಪದವಿಯ ದ್ವಿತೀಯ ವರ್ಷದಲ್ಲಿ ಅಳವಡಿಸಲು ಅಧ್ಯಯನ ಮಂಡಳಿಯ ಅಧ್ಯಕ್ಷರುಗಳು ಶಿಫಾರಸ್ಸು ಮಾಡಿರುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿದ್ಯಾ ವಿಷಯಕ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಈ ಕೆಳಕಂಡ ಪಠ್ಯಕ್ರಮಗಳಿಗೆ ಅಧಿಸೂಚನೆ ಹೊರಡಿಸಿರುವುದನ್ನು ವಿದ್ಯಾ ವಿಷಯಕ ಸಭೆಯು ಅನುಸಮರ್ಥಿಸಿತು.<br>1. English<br>2. Fine Arts<br>3. B.Com<br>4. SEC-Financial Education and Investment Awareness<br>5. SEC-Artificial Intelligence<br>6. SEC-Bharath Scouts & Guides Rovers and Rangers |

| | |
|---|---|
| III.2 | Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ಮೈಸೂರು ಜಿಲ್ಲೆ ಬೈಲುಕುಪ್ಪೆಯಲ್ಲಿರುವ Sera Jey Monastic Institute ಸಂಸ್ಥೆಗೆ Specialized Programme ಅಡಿಯಲ್ಲಿ 1) B.A. Hons. (Ancient Tibetan Language) 2) B.A. – Hons (Ancient Philosophy) and 3) B.A.-Hons (Ancient Psychology) ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯದಿಂದ 2022-23ನೇ ಶೈಕ್ಷಣಿಕ ಸಾಲಿಗೆ ಮಾನ್ಯತೆ ನೀಡಿ ದಿನಾಂಕ 25-07-2022ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಅಧ್ಯಯನ ಮಂಡಳಿಯು ಸಲ್ಲಿಸಿರುವ ಶಿಫಾರಸ್ಸುಗಳನ್ನು ಕಲಾ ನಿಕಾಯದ ಸಭೆಯ ಅನುಮೋದನೆ ಕಾಯ್ದಿರಿಸಿ, ಈ ಕೋರ್ಸ್‌ಗಳ ರೆಗ್ಯುಲೇಷನ್ಸ್, ಪಠ್ಯಕ್ರಮಗಳು ಮತ್ತು Scheme of Examination ಗಳಿಗೆ ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

1) ಶ್ರೀ ಹೆಚ್.ಪಿ. ಶಶಿಕುಮಾರ್ ಅವರು ಮಾತನಾಡಿ, ಕೆ-ಸೆಟ್ ಉತ್ತಮ ನಿರ್ವಹಣೆಗಾಗಿ ನ್ಯಾಕ್ ಸಮಿತಿ ಶ್ಲಾಘಿಸಿತು. ಆದರೆ ಕೆ-ಸೆಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆಯೆಂದು ಸಂಸದರು ಆರೋಪಿಸಿದರು. ಪರೀಕ್ಷಾ ನಿರ್ವಹಣೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನೀಡಿ ಸರ್ಕಾರ ಆದೇಶ ನೀಡಿದೆ ಹಾಗೂ ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸಿ ಆದೇಶ ನೀಡಿದೆ. ಈ ಎಲ್ಲಾ ಸಂದರ್ಭದಲ್ಲೂ ವಿಶ್ವವಿದ್ಯಾನಿಲಯವು ಸ್ಪಷ್ಟನೆ ನೀಡಲಿಲ್ಲವೇಕೆ ಎಂದು ಪ್ರಶ್ನಿಸಿದರು. ಕೆ-ಸೆಟ್ ಅಕ್ರಮದಿಂದಾಗಿ ಶತಮಾನದ ಇತಿಹಾಸವಿರುವ ವಿಶ್ವವಿದ್ಯಾನಿಲಯಕ್ಕೆ ಕಪ್ಪು ಚುಕ್ಕೆ ಅಂಟಿಕೊಂಡಿದೆ. ಪ್ರತಿಕ್ರಿಯೆ ನೀಡದ್ದರಿಂದ ಲೋಪ ಒಪ್ಪಿಕೊಂಡಂತಾಗಲಿಲ್ಲವೇ ಎಂದು ಬೇಸರ ವ್ಯಕ್ತಪಡಿಸಿದರು.

ಕುಲಪತಿ ಪ್ರೊ. ಹೆಚ್. ರಾಜಶೇಖರ್‌ರವರು ಪ್ರತಿಕ್ರಿಯಿಸಿ ಪರೀಕ್ಷೆ ಕುರಿತು ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗವೇ ನಿರ್ಧರಿಸುತ್ತಿತ್ತು. ಈಗ ರಾಜ್ಯ ಸರ್ಕಾರಕ್ಕೆ ಅಧಿಕಾರ ವರ್ಗಾಯಿಸಿದೆ. ಕೆಇಎ ಮೂಲಕ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಆದೇಶಿಸಿದೆ. ಕೆ-ಸೆಟ್ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲವೆಂದು ತಿಳಿಸಿದರು.

2) ಕಲಾ ನಿಕಾಯದ ಡೀನರಾದ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಅವರು ಮಾತನಾಡಿ, ಕಲಾ ನಿಕಾಯದ ಅಡಿಯಲ್ಲಿ ಬರುವ Specialized Programmeನ 2022-23ನೇ ಶೈಕ್ಷಣಿಕ ಸಾಲಿನಲ್ಲಿ NEP-2020ರ ಸ್ನಾತಕ ಪದವಿಯ ಪಠ್ಯಕ್ರಮವನ್ನು ಮುಂದಿನ ಕಲಾ ನಿಕಾಯದ ವಾರ್ಷಿಕ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ಅನುಸಮರ್ಥಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

3) ಪ್ರೊ. ಹೆಚ್.ಟಿ. ಬಸವರಾಜಪ್ಪ ಅವರು ಮಾತನಾಡಿ, ಜೀವ ರಸಾಯನಶಾಸ್ತ್ರ ಮತ್ತು ಸೂಕ್ಷ್ಮ ಜೀವಾಣುಶಾಸ್ತ್ರ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರ ಸಂಬಂಧವಾಗಿ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯಲಾಗಿದೆ ಇದೂವರೆವಿಗೂ ಉತ್ತರ ಬಂದಿರುವುದಿಲ್ಲವೆಂದು ತಿಳಿಸಿದರು.

4) ಶ್ರೀ ಹೆಚ್.ಪಿ. ಶಶಿಕುಮಾರ್ ರವರು ಮಾತನಾಡಿ, ಪ್ರತಿ ವಿಷಯದ ಅಧ್ಯಯನ ಮಂಡಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವಾಗ ನಿಯಮಗಳನ್ನು ಅಳವಡಿಸಿಕೊಂಡು ಎಲ್ಲಾ ಬೋಧಕರುಗಳಿಗೂ ಅಧ್ಯಯನ ಮಂಡಳಿ ಅಧ್ಯಕ್ಷರುಗಳನ್ನಾಗಿ ಪರಿಗಣಿಸಲು ಅವಕಾಶ ಕಲ್ಪಿಸಬೇಕೆಂದು ಪ್ರಸ್ತಾಪಿಸಿದರು.

5) ಪ್ರೊ. ಎಂ.ಎಸ್. ಶೇಖರ್ ಅವರು ಮಾತನಾಡಿ, ಅಧ್ಯಯನ ಮಂಡಳಿಯ ಅಧ್ಯಕ್ಷರನ್ನು ನೇಮಕ ಮಾಡುವಾಗ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ, ಸೇವಾ ಹಿರಿತನ ಆಧಾರದ ಮೇಲೆ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ತಿಳಿಸಿದರು.

6) ಮಾನ್ಯ ಕುಲಪತಿಯವರು ಮಾತನಾಡಿ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳನ್ನು ನಾಮನಿರ್ದೇಶನಾ ಸಂಬಂಧ ಕ್ರಮವಹಿಸಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.

ಅಂತಿಮವಾಗಿ, ಮಾನ್ಯ ಕುಲಸಚಿವರು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಎಲ್ಲಾ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕುಲಸಚಿವೆ ಹಾಗೂ ಸದಸ್ಯ ಕಾರ್ಯದರ್ಶಿ

ಸಹಿ/-
ಕುಲಪತಿಗಳು (ಪ್ರಭಾರ) ಹಾಗೂ ಅಧ್ಯಕ್ಷರು